ಶ್ರೀ ಬಾಪೂರಾವ್ ದೇಶಪಾಂಡೆ.—ಇವೊತ್ತು ಧಾರವಾಡ ಹಬ್ಬಳ್ಳಿ ಒಂದೇ ನಗರ ಇದೆ, ಹೆಚ್ಚಿನ ಸರ್ಕಾರಿ ಕಚೇರಿಗಳು, ವಿಭಾಗ ಮಟ್ಟದ್ದು, ಜಿಲ್ಲಾ ಮಟ್ಟದ್ದು ಧಾರವಾಡದಲ್ಲಿ ಇದೆ, ಧಾರವಾಡ ಘಟಕದಲ್ಲಿ ಹೆಚ್ಚಿನ ಮನೆಗಳನ್ನು ಕಟ್ಟಿಸತಕ್ಕದ್ದು ಕಾಣಿಸಿಲ್ಲ, ಧಾರವಾಡದಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಹೌಸಿಂಗ್ ಬೋರ್ಡ್ ಕಡೆಯಿಂದ ಧಾರವಾಡದಲ್ಲಿ ೮೨೦ ಮನೆಗಳನ್ನು ಕಟ್ಟಿಸತಕ್ಕ ಯೋಜನೆ ಹಾಕಿಕೊಂಡಿದ್ದಾರೆ. ಇವೊತ್ತು ೨,೨೪೦ ಜನ ಸರ್ಕಾರಿ ನೌಕರರು ಏನಿದ್ದಾರೆ ಅವರು ಬೇರೆ ಬೇರೆ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟವರು ಇದ್ದಾರೆ. ಎಲ್ಲಾ ಡಿಪಾರ್ಟ್‌ಮೆಂಟ್ ನವರಿಗೂ ಬರೆದು ಬಡ್ಜೆಟ್ ಪ್ರಾವಿಜನ್ ಮಾಡಬೇಕಾಗುತ್ತದೆ. ಪಿ. ಡಬ್ಲ್ಯು. ಡಿ. ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟಿನವರು, ಬಡ್ಜೆಟ್‌ನಲ್ಲಿ ಹಣ ಪ್ರೊವೈಡ್ ಮಾಡಿಕೊಂಡು ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಹಾಕಿಕೊಂಡಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ. ಮಾನ್ಯ ಮಂತ್ರಿಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಳ್ಳಿಯಲ್ಲಿ ಮನೆಗಳನ್ನು ಕಟ್ಟಿಸತಕ್ಕದ್ದು ನಡೆಯುತ್ತಿದೆ ಎಂದು ಹೇಳಿದರು. ಪ್ರತಿ ವರ್ಷ ಎಷ್ಟು ಮನೆಗಳನ್ನು ಕಟ್ಟಿಸಲಿಕ್ಕೆ ಯೋಜನೆ ಹಾಕಿಕೊಂಡಿದ್ದೀರಾ ?

ಶ್ರೀ ಧರ್ಮಸಿಂಗ್.—ಇದು ಧಾರವಾಡ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆ ಇದೆ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ಉತ್ತರ ಒದಗಿಸುತ್ತೇನೆ.

ಶ್ರೀಕೆ. ಹೆಚ್, ಹನುಮೇಗೌಡ.—ಹೋಬಳಿ ಮಟ್ಟದಲ್ಲಿ ಟ್ವಿನ್ ಕ್ವಾರ್ಟರ್ಸ್ ಕಟ್ಟತಕ್ಕ ಯೋಜನೆ ಇತ್ತು. ಇವುಗಳಲ್ಲಿ ಏನಾಗಿದೆ ಎಂದರೆ, ಕೆಲಸಕ್ಕೆ ಫೌಂಡೇಷನ್ ಹಾಕಿದ್ದಾರೆ. ಕೆಲವು ಅರ್ಧ ಕಟ್ಟಡಗಳಿಗಾಗಿ ನಿಂತಿವೆ. ಆ ಯೋಜನೆ ಕೆಲಸ ಏನಾದರೂ ಅರ್ಧಕ್ಕೆ ನಿಂತಿದ್ದರೆ, ಆ ಯೋಜನೆಯನ್ನು ಕಂಟಿನ್ಯೂ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಈಗ ಹೊಸದಾಗಿ ೫,೫೦೦ ಕ್ವಾರ್ಟರ್ಸ್ ಏನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ಈಗಾಗಲೇ ಹಣ ಕೊಡಲಾಗಿದೆ. ಈಗ ಮಾನ್ಯ ಸದಸ್ಯರು ಹೇಳಿರುವಂಥಾದ್ದರ ಬಗ್ಗೆ ವಿಚಾರ ಮಾಡಿ ದುಡ್ಡು ಕೊಡುವ ಪ್ರಯತ್ನ ಮಾಡುತ್ತೇನೆ.

*Rural Water Supply Scheme in Afzalpur Taluk

861 SRI M. Y. PATIL (Afzalpur):—Will the Minister for Rural Development and Panchayatraj be pleased to State.—

(a) the amount sanctioned for Rural Water Supply Scheme in Afzalpur taluk so far;

(b) out of them, the number of schemes that came into operation, whether it has come to the notice of Government that the works are not being carried out properly though it has come into effect;

(c) if so, whether the Government would see that the remaining schemes would be done properly?

SRI B. RAMAIAH.—Minister for Rural Development and panchayatraj

(a) 29 Rural Water Supply Schemes have been sanctioned in Afzalpur taluk so far.

(b) Out of them, 15 Schemes have come into operation. The remaining schemes are under progress and it has not come to the

notice of Government so far that the completed schemes are not functioning properly.

(c) A Mobile unit has been set up to set right the sudden mechanical defects, if any.

ಶ್ರೀ ಎಂ. ವೈ. ಪಾಟೀಲ್.—ಅಫಜಲಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ ಸುಮಾರು ೯೯ ಯೋಜನೆ ಮಂಜೂರಾಗಿದೆ ಎಂದು ಹೇಳಿದ್ದು, ಆದರಲ್ಲಿ ೧೫ ಯೋಜನೆಗಳು ಈಗ ಪೂರ್ತಿಯಾಗಿವೆ ಎಂದು ಹೇಳುತ್ತಿದ್ದೀರಿ. ಇನ್ನು ೧೪ ಯೋಜನೆಗಳು ಪೂರ್ತಿಯಾಗಿಲ್ಲ ಎನ್ನುವುದು ಕಂಡು ಬರುತ್ತಿದೆ. ಈ ೧೪ ಯೋಜನೆಗಳಿಗೆ ಯಾವಾಗ ಮಂಜೂರಾತಿ ಸಿಕ್ಕಿದೆ. ಯಾವಾಗ ಮಂಗಿಯಂತ್ತವೆ ಎನ್ನಿವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಮಯ್ಯ.—ವಿವರಗಳನ್ನು ಇದರ ಜೊತೆಯಲ್ಲಿ ಪಟ್ಟಿ ಮಾಡಿ ಕೊಟ್ಟಿದ್ದೇವೆ ೧೪ ಯೋಜನೆಗಳು ಕಾರ್ಯಗತವಾಗುತ್ತಿವೆ. ಕೇಂದ್ರ ಸರ್ಕಾರದ ಎ.ಆರ್.ಡಬ್ಲ್ಯು ಸ್ಕೀಂ ೨, ಮತ್ತು ರಾಜ್ಯ ಸರ್ಕಾರದ ೧೩ ಎನ್.ಆರ್.ಡಬ್ಲ್ಯು ಸ್ಕೀಂನಲ್ಲಿ ಕೆಲಸ ಮುಗಿದು ಜನರಿಗೆ ನೀರನ್ನು ಒದಗಿಸಿಕೊಡುತ್ತಿದ್ದೇನೆ. ವಿವಿಧ ಹಂತಗಳಲ್ಲಿ ಪ್ರಗತಿಪಥದಲ್ಲಿ ನಾವು ಸಾಗುತ್ತಿದ್ದೇವೆ. ಎಲ್ಲೆಲ್ಲಿ ಕೆಟ್ಟು ಹೋಗಿವೆಯೆಂದು ತಾವು ಹೇಳಿದ್ದೀರಿ ಅಂಥ ಕಡೆಗೆ ಸಂಚಾರಿ ಘಟಕಗಳನ್ನು ಕೊಟ್ಟು ಅವುಗಳನ್ನು ಸರಿಪಡಿಸುವ ಕ್ರಮ ಕೈಗೊಂಡಿದ್ದೇವೆ.

ಶ್ರೀ ಷೇರ್‌ಖಾನ್.—೧೫ ಯೋಜನೆಗಳು ಪೂರ್ತಿಯಾಗಿವೆ ಎಂದು ಹೇಳುತ್ತಿದ್ದೀರಿ, ಆದರೆ ಕೇವಲ ೪ ಯೋಜನೆಗಳಲ್ಲಿ ಮಾತ್ರ ತಾವು ನೀರನ್ನು ನಮಗೆ ಕೊಡುತ್ತಿದ್ದೀರಿ, ಉಳಿದವು ಬಂದ್ ಆಗಿವೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಬಿ. ರಾಮಯ್ಯ.—ಕೆಟ್ಟು ಹೋಗಿರುವುದನ್ನೂ ಮತ್ತು ತಾಂತ್ರಿಕ ತೊಂದರೆಗಳಿಂದ ನಿಂತಿರುವುದನ್ನೂ ರಿಪೇರಿ ಮಾಡುವ ಸಲುವಾಗಿ ಸಂಚಾರಿ ಘಟಕವನ್ನು ಕೊಟ್ಟಿದ್ದೇವೆ, ಅವರು ಸರಿಪಡಿಸಿಕೊಡುತ್ತಾರೆ. ಯಾವುದಾದರೂ ನಿರ್ದಿಷ್ಟವಾದ ಪ್ರಕರಣ ತಾವು ತಿಳಿಸಿದರೆ ನೇರವಾದ ನಿರ್ದೇಶನವನ್ನು ಕೊಟ್ಟು ಸರಿಪಡಿಸುವಂತೆ ತಿಳಿಸುತ್ತೇವೆ.

ಶ್ರೀ ಷೇರ್‌ಖಾನ್.—ತಾವು ಬೇಕಾದಷ್ಟು ಯೋಜನೆಗಳನ್ನು ಮಂಜೂರು ಮಾಡಿದ್ದೀರಿ ಆದರೆ ಅದು ಕೆಲಸವಾಗುತ್ತಿಲ್ಲವೆಂಬುದು ಎಲ್ಲ ಕಡೆಯಿಂದಲೂ ಕಂಡು ಬರುತ್ತಿದೆ. ಸೂಪರಿಂಟೆಂಡೆಂಟ್ ಇಂಜಿನಿಯರ್ ಬೆಳಗಾಂನಲ್ಲಿದ್ದಾರೆ, ಚೀಫ್ ಇಂಜಿನಿಯರ್ ಧಾರವಾಡದಲ್ಲಿದ್ದಾರೆ, ಎಕ್ಸಕ್ಯೂಟಿವ್ ಇಂಜಿನಿಯರ್‌ಗಳಿದ್ದಾರೆ. ಇವರ ಆಫೀಸುಗಳು ಬೇರೆ ಬೇರೆ ಕಡೆ ಇರುವುದರಿಂದ ಇವರಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲವಾಗಿದೆ. ಆದ್ದರಿಂದ ಇದನ್ನೆಲ್ಲಾ ಒಂದು ಕಡೆ ಸೇರಿಸಿ ಆದಷ್ಟು ಬೇಗ ಈ ಯೋಜನೆ ಕಾರ್ಯಗತವಾಗುವಂತೆ ಮಾಡುತ್ತೀರಾ?

ಶ್ರೀ ಬಿ. ರಾಮಯ್ಯ.—ಹಿಂದೆ ೨೦೦ ಯೋಜನೆಗಳನ್ನು ತೆಗೆದುಕೊಳ್ಳುತ್ತಿದ್ದುದರಿಂದ ಶೀಘ್ರವಾಗಿ ಆಗುತ್ತಿದ್ದುವು. ಆದರೆ ೮೧–೮೨ರ ಸಾಲಿನಲ್ಲಿ ನಾವು ೧೦೦೦ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಇನ್ನೂ ಮಂಜೂರಾದುವನ್ನು ಕೊಡಬೇಕಾಗುತ್ತದೆ. ಸೂಪರಿಂಟೆಂಡೆಂಟ್ ಇಂಜಿನಿಯರ್ ಮಟ್ಟದಲ್ಲಿ, ಚೀಫ್ ಇಂಜಿನಿಯರ್ ಮಟ್ಟದಲ್ಲಿ ಎಷ್ಟೆಷ್ಟು ಹಣವನ್ನು ಕೊಡಬೇಕೋ ಅಷ್ಟಷ್ಟು ಕೊಟ್ಟಿದ್ದೇವೆ. ಅವರಿಗೆ ಸಿಬ್ಬಂದಿಯನ್ನು ಚಾಸ್ತಿ ಮಾಡಿರುವ ವಿಚಾರವನ್ನೂ ಕೂಡ ನಾನು ಹೇಳಿದ್ದೇನೆ. ನನ್ನ ಮಟ್ಟದಲ್ಲಿ ಕೂಡ ಏನೇನು ಮಾಡುವುದಕ್ಕೆ ಸಾಧ್ಯ ಅದನ್ನೆಲ್ಲಾ ಮಾಡಿ ಕಳುಹಿಸಿ ಕೊಡುತ್ತಿದ್ದೇನೆ. ನಾವು ಹೆಚ್ಚಿನ ಸ್ಕೀಂಗಳನ್ನು ಒಟ್ಟಿಗೇ ತೆಗೆದುಕೊಂಡಿರುವುದರಿಂದ ಸ್ವಲ್ಪ ತಡವಾಗುತ್ತಿದೆ. ಆದರೂ ಆದಷ್ಟು ಬೇಗ ಮಾಡಿಸಿಕೊಡುವಂತೆ ವ್ಯವಸ್ಥೆ ಮಾಡುತ್ತೇನೆ. ಇನ್ನು ಇತ್ತೀಚಿನ ವರೆಗೂ ಚೀಫ್ ಇಂಜಿನಿಯರ್‌ರವರ ಆಫೀಸು ಧಾರವಾಡದಲ್ಲಿದ್ದುದು ನಿಜ. ಈಗ ಅದನ್ನು ಬೆಂಗಳೂರಿಗೆ ವರ್ಗ ಮಾಡಿದ್ದೇವೆ.

ಶ್ರೀ ಎಂ. ವೈ. ಪಾಟೀಲ್.—ಹರಿಜನ ಕೇರಿಯಲ್ಲಿ ಪೈಪ್ ಲೈನ್ ಆಗಿಲ್ಲ. ಅಷ್ಟೇ ಅಲ್ಲ ಬೇರೆ ಕಡೆಗಳಲ್ಲೂ ಕೂಡ ಪೈಪ್ ಲೈನ್ ಆಗಿಲ್ಲ. ಆಗ್ಮೆಂಟೇಷನ್ ಸ್ಕೀಂನ್ನು ತೆಗೆದುಕೊಂಡು ಈ ಯೋಜನೆಯನ್ನು ಪೂರ್ತಿ ಮಾಡುತ್ತೀರಾ?

ಶ್ರೀ ಬಿ. ರಾಮಯ್ಯ.—ಪೆಡ್ಡೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಡೂಲ್ಡ್ ಟ್ರೈಬ್ಸ್ ಜನರು ಇರತಕ್ಕ ಜಾಗಗಳಲ್ಲಿ ಈ ಯೋಜನೆಗಳಂ ಯಾವತ್ತೇ ತೆಗೆದುಕೊಂಡಿದ್ದರೂ ಅಲ್ಲಿಗೆ ಮೊದಲಂ ನಲ್ಲಿಗಳನ್ನು ಹಾಕಬೇಕೆಂದು ಮುಖ್ಯ ಇಂಜಿನಿಯರ್‌ರವರಿಗೆ ಆದೇಶ ನೀಡಿದ್ದೇನೆ. ಅವರು ಆ ಕೆಲಸವನ್ನು ಮಾಡಿಕೊಡುತ್ತಾರೆ.

Government Hospital in Thimmasandra Village, Channapatna Taluk.

884 SRI D. T. RAMU (Channapatna).—Will the Minister for Health and Family Welfare be pleased to state.—

(a) whether it is a fact that there is a Government Hospital in Thimmasandra Village of Channapatna Taluk;

(b) if so, whether there are Doctors in that Hospital;

(c) if not, whether the Government would post Doctors?

SRI A. K. ABDUL SAMAD.—Minister for Health and Family Welfare.

(a) No.

(b) Does not arise.

(c) Does not arise.

ಶ್ರೀ ಡಿ. ಟಿ ರಾಮು.—ಸ್ವಾಮಿ, ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ಒಂದು ಸರ್ಕಾರೀ ಆಸ್ಪತ್ರೆ ಇರುವುದು ನಿಜವೆ ? ಎಂದು ನಾನು ಕೇಳಿರುವ ಪ್ರಶ್ನೆಗೆ ತಾವು ಇಲ್ಲ. ಎಂದು ಉತ್ತರ ಕೊಟ್ಟಿದ್ದೀರಿ. ಈ ಉತ್ತರವನ್ನು ತಾವು ಜವಾಬ್ದಾರಿಯಿಂದ ಹೇಳುತ್ತಿದ್ದೀರಾ ?

MR. SPEAKER—It is supposed to be so.

ಶ್ರೀ ಡಿ. ಟಿ. ರಾಮು.—ರ್ಗಿಲೆನೇ ಇಸವಿಯಲ್ಲಿ ಕೆಂಗಲ್ ಹನುಮಂತಯ್ಯನವರು ಸ್ವತಃ ಬಂದು ಈ ಆಸ್ಪತ್ರೆಯನ್ನು ಉದ್ಘಾಟಿಸಿದ್ದಾರೆ. ಅಲ್ಲಿ ೨ ವರ್ಷಗಳಕಾಲ ವೈದ್ಯರು ಇದ್ದರು. ಆನಂತರ ವಾರಕ್ಕೆ ಎರಡುಸಾರಿ ವೈದ್ಯರು ಬಂದು ಹೋಗುತ್ತಿದ್ದರು. ಇದರ ಬಗ್ಗೆ ಸಾಕಷ್ಟು ವ್ಯವಹಾರ ನಡೆದಿದೆ. ಇಷ್ಟೆಲ್ಲಾ ಇದ್ದರೂ ತಾವು ಆ ಊರಿನಲ್ಲಿ ಆಸ್ಪತ್ರೆಯೇ ಇಲ್ಲವೆಂದು ಹೇಳುತ್ತಿರುವುದು ಸರಿಯೆ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ರ್ಗಿಲೆರಲ್ಲಿ ಕೆಂಗಲ್ ಹನುಮಂತಯ್ಯನವರೇ ಉದ್ಘಾಟನೆ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ. ಆದರೆ ಅಂಥಾದ್ದು ಯಾವುದೂ ನಮ್ಮ ರೆಕಾರ್ಡ್ಸ್‌ನಲ್ಲಿ ಇಲ್ಲ. ಅದಕ್ಕೆ ಸರ್ಕಾರೀ ಆದೇಶ ಕೂಡ ಹೊರಡಿಸಿಲ್ಲ. ಸಾಮಾನ್ಯವಾಗಿ ನಮ್ಮ ಇಲಾಖೆಯಿಂದ ಆಸ್ಪತ್ರೆಗಳನ್ನು ಮಂಜೂರು ಮಾಡಿದರೆ ಸರ್ಕಾರೀ ಆದೇಶವನ್ನು ಹೊರಡಿಸುತ್ತೇವೆ ಡ್ರಗ್ಸ್ ಎಷ್ಟು ಬೇಕೋ ಅಷ್ಟು ಕೊಡುತ್ತೇವೆ, ಈಗ ಅಲ್ಲಿ ಒಂದು ಬಿಲ್ಡಿಂಗ್ ಇದೆ, ಹಿಂದೆ ವಾರಕ್ಕೆ ಎರಡುಸಲ ವೈದ್ಯರು ಭೇಟಿ ಕೊಡುತ್ತಿದ್ದರೆಂದು ತಾವು ಹೇಳುತ್ತಿದ್ದೀರಿ. ವಾರಕ್ಕೆ ಒಂದು ಸಾರಿ ಮೆಡಿಕಲ್‌ಆಫೀಸರ್ ಹಾಗೂ ಲೇಡಿ ಡಾಕ್ಟರ್ ಭೇಟಿ ಕೊಡುವಂತೆ ಆಜ್ಞೆ ಮಾಡಿದ್ದೇವೆ. ಹಿಂದಿನ ವಿಧಾನ ಸಭಾ ಸದಸ್ಯರಾದ ಮಾದೇಗೌಡರು ಈ ಬಗ್ಗೆ ರೆಪ್ರೆಸೆಂಟ್ ಮಾಡಿದ್ದಾರೆ. ಅದನ್ನು I am seriously considering as to whether sanction could be accorded to open a Health Unit in future.